'ಕಂಗಲ್'ದೊ 'ಚಲ್ ಚಲ್ ರೆ ನೌಜವಾನ್' ಹಾಡನ್ನು ಗುನುಗುನಿಸುತ್ತಿತ್ತು. ಹಾಗೆ ಗುನುಗುತ್ತಲೇ ಸೂರಿ ಹಿಂದಿನ ದಿನದ ಪತ್ರಿಕೆಯಲ್ಲಿ ನೋಡದೆ ಉಳಿದಿದ್ದ ಜಾಹಿರಾತುಗಳನ್ನೆಲ್ಲ ಓದಿ ಮುಗಿಸಿದ.

ಆ ಹೊತ್ತಿಗೆ ಗಂಟೆ ಒಂಬತ್ತಾಗಿತ್ತು. ಅಮ್ಮ ಕೊಟ್ಟ ಅಕ್ಕಿ ರೊಟ್ಟಿಯ ಬ್ರೆಕ್‌ಫಾಸ್ಟ್ ಮುಗಿಸಿ, ಎರಡನೆ ಕಪ್ ಕಾಫಿ ಕುಡಿದು, ಪೇರಿಗೆ ತಯಾರಿ ನಡೆಸಿದ. ಕೋಣೆಯ ಹಿಂಭಾಗಕ್ಕೆ ಹಿತ್ತಲಿಗೆ ಹತ್ತಿಕೊಂಡಂತಿದ್ದ ಗೋಡೆಯಲ್ಲಿ ಒಂದು ಕಿಟಕಿ, ಆಚೆ ಖಾಲಿ ಜಾಗ. ಅಲ್ಲಿ ಅಮ್ಮ ಪೂಜೆಯ ಹೂವಿಗೆಂದು ಬೆಳೆಸಿಕೊಂಡಿದ್ದ ಕಣಿಗಲೆ, ಕನಕಾಂಬರ, ನಂದಿಬಟ್ಟಲು ಮುಂತಾದ ನಾಲ್ಕಾರು ಗಿಡಗಳು, ನಡುವೆ ದೆವ್ವದಂತೆ ಬೆಳೆದಿದ್ದ ಒಂದು ಚಂದ್ರ ಸೀಬೆಮರ. ಸೂರಿ ಷೇವ್ ಮಾಡಿಕೊಳ್ಳುತ್ತಿದ್ದದ್ದು ಆ ಕಿಟಕಿಯ ಮುಂದೆ ನಿಂತು. ಕಿಟಕಿಗೆ ಕನ್ನಡಿಯನ್ನು ನೇತು ಹಾಕಿ, ಮುಖಕ್ಕೆ ಸಾಬೂನು ತಿಕ್ಕಿ, ರೇಜರ್‌ಗೆ ಹೊಸ ಬ್ಲೇಡ್ ಸಿಕ್ಕಿಸಿ ಕತ್ತೆತ್ತಿದಾಗ ಹಿತ್ತಲ ದೆವ್ವ ಸೀಬೆ ಮರದ ಮೇಲಿನ ಒಂದು ದೃಶ್ಯ ಥಟ್ಟನೆ ಸೂರಿಯ ಗಮನ ಸೆಳೆಯಿತು. ಒಂದು ಕೊಂಬೆಯ ಮೇಲೆ, ಆರಂಗುಲ ಎತ್ತರದಲ್ಲಿ ಯಾವ ಆಸರೆಯೂ ಇಲ್ಲದೆ ಶೂನ್ಯದಲ್ಲಿ ಎರಡು ಅಚ್ಚಗೆಂಪಿನ ಹಣ್ಣುಗಳು ನೇತಾಡುತ್ತಿದ್ದವು. ಸೀಬೆ ಮರದಲ್ಲಿ ಅತ್ತಿಹಣ್ಣಿಗೂ ಅಚ್ಚಗೆಂಪಾದ ಹಣ್ಣುಗಳನ್ನು ಯಾರು ತಾನೆ ನಿರೀಕ್ಷಿಸಿಯಾರು? ಸೂರಿ ಷೇವನ್ನು ಮರೆತು ಮತ್ತೆ ಕಣ್ಣುಜ್ಜಿಕೊಂಡು ನೋಡಿದ. ಮತ್ತೆ ಅದೇ ದೃಶ್ಯ. ಎದ್ದು ಹೋಗಿ ಕನ್ನಡಕ ತಂದು, ಸೋಪು ತಿಕ್ಕಿದ ಮುಖದ ಮೇಲೆಯೇ ಅದನ್ನು ಹೇಗೋ ನೇತಾಡಿಸಿಕೊಂಡು ನೋಡಿದ. ಭ್ರಮೆ ಒಡೆಯಿತು. ಅವು ಹಣ್ಣಲ್ಲ. ಎರಡು ಗಿಣಿಗಳು ತಮ್ಮ ಕೆಂಪು ಕೊಕ್ಕುಗಳನ್ನು ಒಂದಕ್ಕೊಂದು ತಾಗಿಸಿಕೊಂಡು ಕೂತಿದ್ದವು. ಅವುಗಳ ಮೈಬಣ್ಣ ಮರದ ಹಸಿರಿನಲ್ಲಿ ಕರಗಿಹೋಗಿ ಕೆಂಪುಕೊಕ್ಕಷ್ಟೇ ಎದ್ದು ಕಾಣುತ್ತಿತ್ತು. ನೋಡುತ್ತಿದ್ದಂತೆ ಇನ್ನೂ ಒಂದು ಸಂಗತಿ ಕಣ್ಣಿಗೆ ಬಿತ್ತು. ಮರದ ಕೆಳಗೊಂದು ಧಡಿಯ ಮಾಳಬೆಕ್ಕು ಗಿಣಿಗಳನ್ನೇ ನೋಡುತ್ತ ಮರ ಹತ್ತುವ ಹವಣಿಕೆಯಲ್ಲಿ ಇತ್ತು.

ಸೂರಿ ಹುಟ್ಟಿದಾಗಿನಿಂದ ಮನೆಯಲ್ಲಿ ಆ ಮರವಿತ್ತು. ಆದರೆ ಸೂರಿಯೆಂದೂ ಅದರಲ್ಲಿ ಗಿಣಿಗಳನ್ನು ಕಂಡದ್ದೇ ಇಲ್ಲ. ಸೂರಿಯ ಕಣ್ಣಿಗೆ ಅದು ಬಿದ್ದದ್ದೂ ಆಶ್ಚರ್ಯವೇ. ಅವನೆಂದೂ ಇಂತಹವಕ್ಕೆಲ್ಲ ಗಮನ ಕೊಟ್ಟವನಲ್ಲ. ಎಂತಹ ಮನೋಹರ ದೃಶ್ಯ! ಸೂರಿ ದಡದಡ ಮೆಟ್ಟಿಲಿಳಿದು ಬಂದು ತಾನು ಕಂಡದ್ದನ್ನು ತಾಯಿಗೆ ಹೇಳಿದ. ಅವಳೂ ಎಂದೂ ಆ ಮರದಲ್ಲಿ ಗಿಣಿಗಳನ್ನು ನೋಡಿರಲಿಲ್ಲ. 'ನಿನಗೇನೋ ಭ್ರಾಂತು' ಅಂದಳು. ಸೂರಿ ಸಿಟ್ಟುಗೊಂಡು 'ನಾನು ಏನು ಹೇಳಿದರೂ ನಿನಗೆ ನಂಬಿಕೆಯಿಲ್ಲ' ಅಂದಾಗ ಅವಳಿಗೆ ಅದು ನಿಜ ಅನಿಸಿತು. 'ಅಮ್ಮಾ, ನೀನೂ ಬಾ, ನೋಡುವಿಯಂತೆ' ಅಂದ ಸೂರಿ. ಮಗ ಅಷ್ಟು ಉಲ್ಲಾಸದಲ್ಲಿರುವುದನ್ನು ಕಂಡ ನೆನಪೇ ಅವಳಿಗಿರಲಿಲ್ಲ. 'ಅಂಥಾದ್ದೆಲ್ಲ ನನ್ನಂಥ ಹಾಳುಮುಂಡೇಯರಿಗೆ ಮಾಡಿದ್ದಲ್ಲ, ಕಣೋ. ನಾವು ನೋಡಬಾರದು' ಎಂದು ವ್ಯಥೆ, ನಾಚಿಕೆ ಬೆರೆತ ದನಿಯಲ್ಲಿ ಹೇಳುವಾಗ ಆ ಜೋಡಿಗಿಣಿಯ ದೃಶ್ಯದಲ್ಲಿ ವಿಶೇಷ ಅರ್ಥಗಳೂ ಹೊಳೆಯ ತೊಡಗಿದವು. 'ಶುಭ ಶಕುನ ಕಣೋ. ಇವತ್ತು ಯಾರೋ ನಿನಗೆ ಹೆಣ್ಣು ಕೊಡೋಕ್ಕೆ ಬರ್‍ತಾರೆ' ಎನ್ನುತ್ತ ಎದ್ದು ತುಪ್ಪದ ದೀಪ ಹಚ್ಚಿಡಲು ದೇವರ ಮನೆಗೆ ನುಗ್ಗಿದಳು. ಸೂರಿ ತಾಯಿಗೆ ಜೋಡಿ ಗಿಣಿಯ ದೃಶ್ಯದ ಬಗ್ಗೆ ಹೇಳುವಾಗ ಅಲ್ಲಿ ಬೆಕ್ಕು ಕಂಡದ್ದನ್ನು ಹೇಳಿಯೇ ಇರಲಿಲ್ಲ. ಬೆಕ್ಕು ಗಿಣಿಗಳಷ್ಟು ಅಪರೂಪದ ದೃಶ್ಯ ಅಲ್ಲವಾದ್ದರಿಂದ ಅದು ಅವನ ಮನಸ್ಸಿನ ಮೇಲೆ ಅಷ್ಟಾಗಿ ಬೇರೂರಿರಲಿಲ್ಲ.

ಸೂರಿಗೆ ಎಂದೋ ಮದುವೆಯ ವಯಸ್ಸು ಆಗಿತ್ತು. ಒಳ್ಳೆಯ ಕುಳವೆಂದ ಮೇಲೆ ಹೆಣ್ಣುಗಳಿಗೇನೂ ಕೊರತೆಯಿರಲಿಲ್ಲ. ಆದರೆ ಬಿ.ಎ. ಮುಗಿಸುವವರೆಗೆ ಮದುವೆಯಾಗೋಲ್ಲ, ಅದೊಂದು ಕುತ್ತಿಗೆಗೆ ನೊಗ ಎಂದು ಖಡಾಖಂಡಿತವಾಗಿ ಹೇಳಿ ಬಿಟ್ಟಿದ್ದ. ತಾಯಿ ಇತ್ತ ಮುದ್ದು ಮಗನಿಗೆ ಎದುರಾಡಲಾಗದೆ, ಅತ್ತ ಕಂಡ ಕಂಡ ದೇವರಿಗೆಲ್ಲ ಹರಕೆ ಹೊರುತ್ತ, ಊರಿನ ಲಕ್ಷಣವಂತ ಹುಡುಗಿಯರನ್ನೆಲ್ಲ ಹಬ್ಬ ಹರಿದಿನಗಳಲ್ಲಿ ಅರಿಸಿನ ಕುಂಕುಮಕ್ಕೆಂದು ಮನೆಗೆ ಕರೆದು ಸೂರಿಯ